ಉಪಾಧ್ಯಕ್ಷರು.—ಆಯಿತು ಬಿಡಿ ಹೇಳಿದ್ದಾರೆ. ಎಷ್ಟು ಸಾರಿ ಕೇಳುತ್ತೀರಿ?

ಶ್ರೀ ವಿನಯ ಕುಮಾರ್ ಸೊರಕೆ.—ಆರ್ಥಿಕ ಮುಗ್ಗಟ್ಟಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪ್ರತಿ ವರ್ಷವೂ ಇದೇ ರೀತಿ ಉತ್ತರ ಕೊಡುತ್ತಿದ್ದಾರೆ. ಆದ್ದರಿಂದ ಸ್ಪಷ್ಟವಾಗಿ ಈ ವರ್ಷ ಕೊಡುತ್ತೇನೆ ಎಂದು ಹೇಳಬೇಕು.

ಶ್ರೀ ಜೀವರಾಜ ಆಳ್ವ.—ಸ್ಪಷ್ಟವಾಗಿ ಹೇಳುತ್ತೇನೆ. ಈ ಸಾರಿ ಹೆಚ್ಚಿನ ರೀತಿಯಲ್ಲಿ ಪರಿಶೀಲನೆ ಮಾಡುತ್ತೇನೆ.

ಶಹಾಬಾದ್ ರೈಲ್ವೆ ಕ್ರಾಸ್‌ನಲ್ಲಿ ರಸ್ತೆ ಮೇಲ್ಸೇತುವೆಯ ನಿರ್ಮಾಣ

೨೧೨೩. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಹಾಬಾದ್‌ನಲ್ಲಿ ರೈಲ್ವೆ ಕ್ರಾಸ್‌ನಲ್ಲಿ ಸುಮಾರು ೮೭ ಲಕ್ಷ ರೂಪಾಯಿಯಲ್ಲಿ ಮೇಲು ಸೇತುವೆಯನ್ನು ನಿರ್ಮಿಸುವ ಯೋಜನೆ ಸುಮಾರು ೧೯೭೮ ರಿಂದಲೂ ಕಾರ್ಯಗತಗೊಳ್ಳದೆ ಇರುವುದು ಸರ್ಕಾರದವರ ಗಮನದಲ್ಲಿದೆಯೇ;

ಆ) ಈ ಯೋಜನೆ ಈಗ ಯಾವ ಹಂತದಲ್ಲಿದೆ ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು ಎಂಬುದರ ಬಗ್ಗೆ ವಿವರವಾದ ವರದಿಯನ್ನು ಕೊಡುವುದು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಮತ್ತು ಆ) ಶಹಾಬಾದ್ ಬಳಿ ರೈಲ್ವೆ ಲೆವಲ್ ಕ್ರಾಸಿಂಗ್ ಸಂಖ್ಯೆ ೮೯-ಬಿ ಬದಲಾಗಿ ರಸ್ತೆ ಮೇಲ್ಸೇತುವೆ ಮತ್ತು ಅಪ್ರೋಚುಗಳ ನಿರ್ಮಾಣದ ಕೆಲಸಕ್ಕಾಗಿ ರೈಲ್ವೆಯವರು ಕಳುಹಿಸಿದ್ದ ೮೫,೪೨,೮೩೭-೦೦ ರೂ.ಗಳ ಅಂದಾಜಿಗೆ ರಾಜ್ಯ ಸರ್ಕಾರದ ಒಪ್ಪಿಗೆಯನ್ನು ಕೇಂದ್ರ ರೈಲ್ವೆಯವರಿಗೆ ೩-೩-೮೮ ರಂದು ತಿಳಿಸಲಾಗಿದೆ. ಈ ಅಂದಾಜಿಗೆ ರೈಲ್ವೆಯವರು ಮಂಜೂರಾತಿಯನ್ನು ನೀಡಿ ಬೇಗನೆ ಮೇಲ್ಸೇತುವೆ ನಿರ್ಮಾಣದ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಸಹ ಅವರನ್ನು ಕೋರಲಾಗಿದೆ. ಅಪ್ರೋಚುಗಳ ನಿರ್ಮಾಣದ ಕೆಲಸವನ್ನು ರಾಜ್ಯ ಸರ್ಕಾರವು ತೆಗೆದುಕೊಳ್ಳುವುದು.

ಶ್ರೀ ಕೆ. ಬಿ. ಶಾಣಪ್ಪ.— ಸುಮಾರು ೧೯೮೭ನೇ ಇಸವಿಯಿಂದ ಈ ಒಂದು ದೊಡ್ಡ ಬೇಡಿಕೆ ೧೯೮೮ ಬಂದರೂ ಇನ್ನೂ ಪೂರ್ತಿಯಾಗಿಲ್ಲ. ಕಳೆದ ಮಾರ್ಚಿಯಲ್ಲೇ ಇದರ ಬಗ್ಗೆ ಒಪ್ಪಿಗೆಯನ್ನು ಕೇಂದ್ರ ಸರ್ಕಾರದ ರೈಲ್ವೇ ಇಲಾಖೆಯವರು ಒಪ್ಪಿಗೆಯನ್ನು ಕೊಟ್ಟು ಅದರಂತೆ ಅವರು ಈಗಾಗಲೇ ಸೇತುವೆ ಕೆಲಸವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ ಅದನ್ನು ಇನ್ನು ೪೮ ತಿಂಗಳಲ್ಲಿ ಮುಗಿಸಬೇಕೆಂಬ ಒಂದು ಕಾರ್ಯಕ್ರಮವನ್ನೂ ಕೂಡ ಇಟ್ಟುಕೊಂಡಿದ್ದಾರೆ. ಸುಮಾರು ೪೧ ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರದಿಂದ ಅಂದರೆ ರಾಜ್ಯದ ಲೋಕೋಪಯೋಗಿ ಇಲಾಖೆಯವರು ಖರ್ಚು ಮಾಡಿ ಅಪ್ರೋಚ್ ರಸ್ತೆಯನ್ನು ಮಾಡಬೇಕಾಗಿದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ಒಂದು ವರ್ಷದಲ್ಲೇ ಆದಷ್ಟು ಬೇಗ ಆ ಕೆಲಸವನ್ನು ಮುಗಿಸಲಿಕ್ಕೆ ಅಧಿಕಾರಿಗಳಿಗೆ ಹೇಳಿದ್ದೇನೆಂದೂ ಸಹ ಹೇಳಿದ್ದಾರೆ. ಅದರಂತೆ ೧೯೮೮-೮೯ನೇ ಸಾಲಿನಲ್ಲೇ ಈ ಅಪ್ರೋಚ್ ರಸ್ತೆಯನ್ನು ಆ ಸೇತುವೆ ಕೆಲಸದೊಡನೆ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.— ಈಗ ಮಾನ್ಯ ಸದಸ್ಯರು ಹೇಳಿದ ಹಾಗೆ ಇವತ್ತು ನನಗೆ ಗೊತ್ತಾಯಿತು. ಅದರ ಬಗ್ಗೆ ಮಂಜೂರಾತಿಯನ್ನು ಕೇಂದ್ರದ ರೈಲ್ವೇ ಇಲಾಖೆಯವರು ಕೊಟ್ಟಿದ್ದಾರೆ, ಕೆಲಸವನ್ನೂ ಕೂಡ ಪ್ರಾರಂಭ ಮಾಡಿದ್ದಾರೆಂಬುದರ ಬಗ್ಗೆ ನಿನ್ನೆತಾನೇ ಬೊಮ್ಮಾಯಿಗೆ ನಮ್ಮ ಅಧಿಕಾರಿಗಳು ಹೋಗಿ ತಿಳಿದುಕೊಂಡು ಬಂದಿದ್ದಾರೆ. ಅವರು ಬಾಬತ್ತಿನ ಕೆಲಸ ಆದಮೇಲೆ ನಾವು ಮಾಡಬೇಕಾದ ಅಪ್ರೋಚ್ ರಸ್ತೆಯ ಕೆಲಸವನ್ನು ಈ ವರ್ಷವೇ ಪ್ರಾರಂಭ ಮಾಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಬಿ. ಶಾಣಪ್ಪ.— ಇದೇ ಪ್ರಕಾರ ಬೇರೆ ಬೇರೆ ಕಡೆಗಳಲ್ಲಿ ಓವರ್ ಹೆಡ್ ಸೇತುವೆ ಕೆಲಸಗಳನ್ನು ರೈಲ್ವೇ ಇಲಾಖೆಯವರು ಕಟ್ಟಿದ್ದಾರೆ. ಆದರೆ ರಾಜ್ಯ ಸರ್ಕಾರದ ವತಿಯಿಂದ ಫಂಡ್ಸ್‌ನ್ನು

ಕೊಡುವಂತಹದ್ದು. ಆಕ್ವಿಜಿಷನ್ ಕೆಲಸ ಮಾಡುವಂಥಾದ್ದರಲ್ಲಿ ಡಿಲೇ ಮಾಡುತ್ತಿದೆ ಎನ್ನುವ ಕಾರಣಕ್ಕಾಗಿ ರೈಲ್ವೇ ಇಲಾಖೆಯವರು ಇಂಥ ಕೆಲಸವನ್ನು ತೆಗೆದುಕೊಳ್ಳುವುದೇ ಇಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ವಿಶೇಷವಾಗಿ ಪತ್ರ ಒಂದನ್ನು ಬರೆದಮೇಲೆ ಅವರು ಈ ಕೆಲಸವನ್ನು ತೆಗೆದುಕೊಂಡಿದ್ದಾರೆ. ಆದರಂತೆ ಅವರು ಈ ಕೆಲಸವನ್ನು ಈ ವರ್ಷವೇ ಮುಗಿಸಬೇಕೆಂಬ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಆದಗೆ ರಾಜ್ಯ ಸರ್ಕಾರದ ವತಿಯಿಂದ ೪೧ ಲಕ್ಷ ರೂಪಾಯಿಗಳ ಪೆಚ್ಚದಲ್ಲಿ ಅಪ್ರೋಚ್ ರಸ್ತೆಯ ಕೆಲಸವನ್ನೂ ಕೂಡ ಬೇಗನೇ ತೆಗೆದುಕೊಂಡು ಸೇತುವೆ ಕೆಲಸದ ಜೊತೆಯಲ್ಲೇ ಈ ಕೆಲಸವನ್ನೂ ಮುಗಿಸುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.— ಈ ಸೇತುವೆ ಕೆಲಸವನ್ನು ಮೊದಲು ಪ್ರಪೋಸ್ ಮಾಡಿದ್ದುದು ಒಂದು ಜಾಗದಲ್ಲಿ. ನಂತರ ಎ.ಸಿ.ಸಿ.ಯವರ ಸಲಹೆಯ ಪ್ರಕಾರ ಮತ್ತೊಂದು ಸ್ಥಳವನ್ನು ನಿಗದಿ ಮಾಡಲಾಗಿದ್ದು ಅಲ್ಲಿ ಕೆಲಸ ನಡೆಯುತ್ತಿದೆ. ಆ ಭಾಗದಲ್ಲಿ ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಆದಷ್ಟು ಬೇಗ ಈ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ತುಂಗಭದ್ರಾ ಜಲಾಶಯ ನೀರಾವರಿ ಕುರಿತಂ

೨೨೭೦. ಶ್ರೀ ಸಿ ಎಂ. ರೇವಣ ಸಿದ್ದಯ್ಯ (ಶಿರಗುಪ್ಪ).— ಮಾನ್ಯ ಕೃಷಿಯ ಯೋಜನೆ ಬಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಭದ್ರಾ ಜಲಾಶಯದ ಎಡದಂಡೆ ನಿಗದಿತ ನೀರಾವರಿ ಪ್ರದೇಶದ ವಿಸ್ತೀರ್ಣವೆಷ್ಟು ?

ಆ) ಈ ಪ್ರದೇಶದ ನೀರಾವರಿಯಲ್ಲಿ ಬೇಸಿಗೆ ಮತ್ತು ಸುಗ್ಗಿ ಬೆಳೆಗಳೆಷ್ಟು, ಮತ್ತು ಸತತ ನೀರಾವರಿ ಪ್ರದೇಶ ಎಷ್ಟು ?

ಇ) ಹಾಗಿದ್ದಲ್ಲಿ ನೀರನ್ನು ಪೂರೈಸಲಾಗಿರುವ ನೀರಾವರಿ ಪ್ರದೇಶದ ಜಮೀನಿನ ವಿಸ್ತೀರ್ಣ ವೆಷ್ಟು ?

ಈ) ಈ ನಿಗದಿತ ಬೆಳೆಗಳನ್ನು ನಿರ್ದಿಷ್ಟ ಕಾಲ ಮಿತಿಯನ್ನು ಇಟ್ಟು ಯೋಜನೆಯ ಪ್ರಕಾರ ಬೆಳೆಯಲು ನಿರ್ಬಂಧಿಸಲಾಗಿದೆಯೇ ?

ಉ) ಸದರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಪಾಲಿಸದಿರುವುದರಿಂದ ಅಭಿವೃದ್ಧಿ ಕುಂಠಿತವಾಗಿದೆಯೇ ?

ಊ) ಹಾಗಿದ್ದಲ್ಲಿ ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ(ಕೃಷಿಯ, ಯೋಜನಾ ಮತ್ತು ನೀರಾವರಿ ಮಂತ್ರಿಗಳು).—

ಅ) ಎಡದಂಡೆ ವೇಲ್ಯೂಟ್ಟದ ನಾಲೆಯಡಿಯಲ್ಲಿ ೧೧೫೮೮ ಎಕರೆ ಮತ್ತು ಎಡದಂಡೆ ಕೆಳಮಟ್ಟದ ನಾಲೆಯಡಿಯಲ್ಲಿ ೬೦೨೬೮೮ ಎಕರೆಗಳು. ಒಟ್ಟು ೬೦೩೮೫೬ ಎಕರೆಗಳು.

ಆ) (೧) ಮುಂಗಾರು ಬೆಳೆ — ೩,೪೭,೯೨೦ ಎಕರೆಗಳು.
(೨) ಹಿಂಗಾರು ಬೆಳೆ — ೨,೧೯,೪೧೩ ,, ಒಟ್ಟು: ೬೦೩೮೫೬
(೩) ಸತತ ನೀರಾವರಿ ಪ್ರದೇಶ — ೩೬,೫೨೨ ,,

ಇ) ೧೯೮೬-೮೭ನೇ ಸಾಲಿನಲ್ಲಿ ಬೆಳೆದ ಜಮೀನಿನ ವಿಸ್ತೀರ್ಣ ೫೫೪೩೦ ಎಕರೆಗಳು.

ಈ) ಹೌದು. ನೀರಾವರಿ ಕಾಯಿದೆಪ್ರಕಾರ ಹಾಗೂ ನೀರಾವರಿಸಲಹಾ ಸಮಿತಿಯಲ್ಲಿತೀರ್ಮಾನವಾದಂತೆ ಬೆಳೆಯಬೇಕಾಗುವ ಕ್ಷೇತ್ರಗಳ ಬೆಳೆಗಳ ವಿವರ. ನೀರನ್ನು ಒದಗಿಸುವ ಅವಧಿ ಸೂಚಿಸುವ ಪ್ರಕಟಣೆಯನ್ನು ಪ್ರತಿ ವರ್ಷ ಹಾಗೂ ಅವಶ್ಯ ಬಿದ್ದಲ್ಲಿ ಮಧ್ಯಂತರದಲ್ಲಿ ಹೊರಡಿಸಲಾಗುವುದು.